
‘ಹೆಬ್ಬೆಟ್ಟು ಒತ್ತಿ ಸಹಿ ಮಾಡಿದ ನಂತರ ಗೋಡೆ ಮೇಲೆಲ್ಲಾ ಬೆರಳು ಒರೆಸಿ ಗಲೀಜು ಮಾಡಬಾರದು’– ಹಳ್ಳಿ ಪಂಚಾಯಿತಿ ಆಫೀಸ್‌ನಲ್ಲಿ ಬೋರ್ಡ್ ಹಾಕಲಾಗಿತ್ತು. ಅದನ್ನು ಓದಿದ ಗುಂಡ, ‘ಮಗನೆ... ನೀ ಬರೆದದ್ದು ಓದೋಕ್ ಬರ್ತಿದ್ರೆ ಅವ್ರು ಯಾಕ್ ಹೆಬ್ಬೆಟ್ ಒತ್ತುತ್ತಿದ್ರು’ ಎಂದು ಬರೆದ.

ಐಸಿಯುನಲ್ಲಿ ಇದ್ದವನ ರಾಶಿಫಲ ನೋಡಿದಾಗ ಅದರಲ್ಲಿ ಹೀಗಿತ್ತು. ‘ಇಂದು ನಿಮಗೆ ಶುಭದಿನ, ದೂರದ ಪ್ರಯಾಣ, ಕಡಿಮೆ ಖರ್ಚು, ಹಳೆಯ ಬಂಧುಗಳನ್ನು ಸಂಧಿಸುವಿರಿ, ಪ್ರಯಾಣಕ್ಕೆ ಯಾವುದೆ ಅಡೆತಡೆ ಇರುವುದಿಲ್ಲ’.




ಕನ್ನಡಿಗ: ಅದೆಂಗ್ಲಾ ಸುಪ್ರೀಂಕೋರ್ಟ್ ಪ್ರತಿಸಲ ನಿಮ್ ಕಡಿಗೆ ನೀರ್ ಬಿಡ್ತಾದಲ್ಲೋ?
ತಮಿಳಿಯನ್: ನಿಮ್ಮ ದೊರೆ ‘ಸಿದ್ರಾಮ’ ನಮ್ಮವರಲ್ವಾ?
ಕನ್ನಡಿಗ: ಅದೆಂಗ್ಲಾ ನಿಮ್ಮವರಂತ ಹೇಳ್ತಿ?
ತಮಿಳಿಯನ್: ‘ಸಿದ್ರಾಮ’ ಹೆಸರನ್ನು ರಿವರ್ಸ್ ಓದಿ ನೋಡಪ್ಪ, ನಿನಗೆ ಗೊತ್ತಾಗುತ್ತೆ.

ಮಗ: ಅಪ್ಪ... ಶ್ರೀ ರಾಮಚಂದ್ರನು ತಂದೆಯ ಮಾತನ್ನು ಪರಿಪಾಲಿಸಿ ತ್ರೇತಾಯುಗದಲ್ಲಿ ದೇವರ ಸ್ಥಾನ ಪಡೆದ.
ಅಪ್ಪ: ಹೌದು ಮಗನೆ, ಅದು ಸತ್ಯ.
ಮಗ: ತಂದೆಯ ಮಾತನ್ನು ಕೇಳದೆಯೂ ‘ಭಕ್ತ ಪ್ರಹ್ಲಾದ’ ಸತ್ಯಯುಗದಲ್ಲಿ ಶ್ರೇಷ್ಠ ಎಂದೆನಿಸಿಕೊಂಡನಲ್ಲವೇ?
ಅಪ್ಪ: ಹೌದು ಮಗ. ಅದೂ ಸತ್ಯವೇ.
ಮಗ: ಹಾಗಾದ್ರೆ, ನಾನು ನಿಮ್ಮ ಮಾತನ್ನು ಕೇಳಬೇಕೋ, ಬೇಡವೋ? ನೀವೇ ಹೇಳಿ?
ಅಪ್ಪ: ಮಗನೇ ನಾವೀಗ ಕಲಿಯುಗದಲ್ಲಿದ್ದೇವೆ. ನಾವಿಬ್ಬರು, ನಿನ್ನ ಅಮ್ಮನ ಮಾತನ್ನು ಪರಿಪಾಲಿಸಿದರೆ, ಇಬ್ಬರಿಗೂ ಒಳ್ಳೆಯದು ಹಾಗೂ ಶಾಂತಿಯುತ ಸುಖ ಜೀವನ ಸಿಗುವುದು.

ಶೋಭಾ ಟೀಚರ್: ವಿನಯ್ ‘ವಿದ್ಯಾ ವಿನಯೇನ ಶೋಭತೆ’ ಇದರ ಅರ್ಥ ಹೇಳೋ?
ವಿನಯ್: ನಿಮ್ಮ ಮಗಳು ವಿದ್ಯಾಳನ್ನಾ ವಿನಯನಾದ ನಾನು ಮದುವೆಯಾದ್ರೆ, ಆಗ ನೀವು ನಂಗೆ ಶೋಭತ್ತೆ.
ಅದನ್ನು ಕೇಳಿದ ಟೀಚರ್ ಕೋಮಾಗೆ ಜಾರಿದರು.

ನರ್ಸ್: ಡಾಕ್ಟರ್ ಆಪರೇಷನ್ ಮಾಡೋಕೆ ಅನಸ್ತೇಷಿಯಾ ಸ್ಟಾಕ್ ಇಲ್ಲವಾ?
ಡಾಕ್ಟರ್: ಅಯ್ಯೋ ಅದಕ್ಯಾಕೆ ಅಷ್ಟೊಂದು ಗಾಬರಿಪಡ್ತೀರಾ?. ರೋಗಿ ಕೈಗೊಂದು ಮೊಬೈಲ್ ಕೊಡಿ.

ಒಬ್ಬ ಹುಡುಗಿ ಚಪ್ಪಲಿ ಶೋ ರೂಂಗೆ ಬಂದು 35 ಜೊತೆ ಚಪ್ಪಲಿ ನೋಡಿ ಸಮಾಧಾನವಾಗದೆ ಅಲ್ಲೆ ಕಣ್ಣಿಗೆ ಬಿದ್ದ ಬೇರೊಂದು ಚಪ್ಪಲಿ ನೋಡಿದಳು.
ಹುಡುಗಿ: ಇದರ ರೇಟ್ ಎಷ್ಟು?
ಸೇಲ್ಸ್‌ಮ್ಯಾನ್: ಇದು ಫ್ರೀ.
ಹುಡುಗಿ: (ಆಶ್ಚರ್ಯದಿಂದ) ಯಾಕೆ ಫ್ರೀ?
ಸೇಲ್ಸ್‌ಮ್ಯಾನ್: ಅದು ನಿಮ್ಮದೆ ಚಪ್ಪಲಿ, ಅದಕ್ಕೆ.

ಡಾಕ್ಟರ್: ನೀನು ಹುಚ್ಚ ಆಗಿದ್ದು ಹೇಗೆ?
ರೋಗಿ: ನಾನು ಒಬ್ಬ ವಿಧವೆಯನ್ನು ಮದುವೆ ಆದೆ. ಆಕೆಯ ಮಗಳನ್ನು ನನ್ನ ತಂದೆ ಮದುವೆ ಆದ. ಹಾಗಾಗಿ ಆ ನನ್ನ ಮಗಳು ನನ್ನ ತಾಯಿಯಾದಳು, ಆಕೆಗೆ ಹುಟ್ಟಿದ ಹೆಣ್ಣು ಮಗು ನನ್ನ ತಂಗಿಯಾಯಿತು. ಅಂದರೆ, ನಾನು ಆ ಮಗುವಿನ ಅಜ್ಜಿಯ ಗಂಡನಾಗಿದೆ. ಇದೆ ರೀತಿ ನನ್ನ ಮಗ ನನ್ನ ತಂದೆಯ ಭಾವ ಮೈದುನನಾದ. ಈ ಪ್ರಕಾರವಾಗಿ ನಾನು...
ಡಾಕ್ಟರ್: ಸಾಕ್ ಸಾಕು ನಿಲ್ಸು. ಇಲ್ಲದಿದ್ರೆ ನಾನೂ ಹುಚ್ಚ ಆಗ್ ಬಿಡ್ತೀನಿ.

ಟೀಚರ್: ಪದ್ದಿ ದೊಡ್ಡವಳಾದ ಮ್ಯಾಲ ಏನು ಆಗ್ತಿ?
ಪದ್ದಿ: ನಾನು ಐಎಎಸ್ ಓದಿ ದೊಡ್ ಆಫೀಸರ್ ಆಗ್ತೇನೆ. ಒಂದ್ ದೊಡ್ಡ ಮನಿ ಕಟ್ಟಿಸ್ತೇನೆ. ಮತ್ತೆ ಫಾರಿನ್ ಟೂರ್ ತಿರುಗಾಡ್ತಾ ಇರ್ತೇನೆ.
ಟೀಚರ್: ಸಾಕ್ ಬಿಡವ್ವ ಬಹಳ ಉದ್ದ ಆಯ್ತು. ಬಸ್ಯಾ, ಒಂದ್ ಲೈನ್‌ನಲ್ಲಿ ಹೇಳು, ನೀ ಏನ್ ಆಗ್ತಿ?
ಬಸ್ಯಾ: ಟೀಚರ್, ನಾ ಪದ್ದಿ ಗಂಡ ಆಗ್ತೇನಿ...

‘ಮೇಡ್ ಇನ್ ಇಂಡಿಯಾ’ಗೆ ಪ್ರಧಾನಿ ಕರೆ



ಮದುವೆಗಳು ವಿದೇಶದಲ್ಲಿ ಆಗುವ ಬದಲು ‘ಮೇಡ್ ಇನ್ ಇಂಡಿಯಾ’ ಆಗಲಿ ಅಲ್ವಾ!

ಪಾರ್ಲಿಮೆಂಟ್‌ನಲ್ಲಿ ಕಲರ್ ಹೊಗೆ



ಹೋಳಿ ಹಬ್ಬ ಆಚರಿಸಲು ಬಂದಿದ್ರಾ? ಡ್ಯಾಡ್!

ಸಂಗ್ರಹ: ಭಾರತೀ ಗಂಗಾಧರ್, ಬೆಂಗಳೂರು